**All India Radio: Bangalore**
**National Bulletin In Kannada**
**14.11.2025 19.35 p.m.**

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**14.11.2025 19.35 p.m.**

***************

ಮುಖ್ಯಾಂಶಗಳು

೧. ಬಿಹಾರ ವಿಧಾನಸಭಾ ಚುನಾವಣೆ; ಭರ್ಜರಿ ಗೆಲುವಿನತ್ತ ಎನ್‌ಡಿಎ ಮೈತ್ರಿಕೂಟ; ಮಹಾಘಟಬಂಧನ್‌ಗೆ ಹಿನ್ನಡೆ

೨. ಏಳು ರಾಜ್ಯಗಳ ೮ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ; ಕಾಂಗ್ರೆಸ್ ಹಾಗೂ ಬಿಜೆಪಿ ತಲಾ ಎರಡು ಸ್ಥಾನಗಳಲ್ಲಿ ಗೆಲುವು

೩. ದಕ್ಷಿಣ ಕೊರಿಯಾ ಹಡಗು ಕಂಪನಿಗಳ ಸಿಇಒಗಳೊಂದಿಗೆ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಸಭೆ

೪. ಎರಡು ಪಂದ್ಯಗಳ ಟೆಸ್ಟ್ ಕ್ರಿಕೆಟ್ ಸರಣಿ; ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ವಿರುದ್ಧ ಭಾರತಕ್ಕೆ ಉತ್ತಮ ಆರಂಭ

***************

ಏಳು ರಾಜ್ಯಗಳ ೮ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ತಲಾ ಎರಡು ಸ್ಥಾನಗಳನ್ನು ಗೆದ್ದಿವೆ,

ಆಮ್ ಆದ್ಮಿ ಪಕ್ಷ, ಪಿಡಿಪಿ, ಜೆಜೆಎಂ ಮತ್ತು ಮಿಜೊ ನ್ಯಾಷನಲ್ ಫ್ರಂಟ್ ತಲಾ ಒಂದು ಸ್ಥಾನವನ್ನು ಗೆದ್ದಿವೆ.

ಜಮ್ಮು-ಕಾಶ್ಮೀರದ ನಗ್ರೊಟಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ದೇವ್ಯಾನಿ ರಾಣಾ ಜಯಗಳಿಸಿದ್ದಾರೆ. ಒಡಿಶಾದಲ್ಲಿ ನೌಪಾದ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಜೈ ಢೋಲಕಿಯಾ ತಮ್ಮ ಸಮೀಪದ ಕಾಂಗ್ರೆಸ್ ಅಭ್ಯರ್ಥಿ ಘಾಸಿ ರಾಮ್ ಮಾಜಿ ವಿರುದ್ಧ ೮೩ ಸಾವಿರಕ್ಕೂ ಅಧಿಕ ಮತಗಳ ಅಂತರದಲ್ಲಿ ಜಯಗಳಿಸಿದ್ದಾರೆ. ತೆಲಂಗಾಣದ ಜುಬ್ಲಿ ಹಿಲ್ಸ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ನವೀನ್ ಯಾದವ್, ರಾಜಸ್ಥಾನದ ಅಂತಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಪ್ರಮೋದ್ ಜೈನ್ ಭಾಯಾ,

ಪಂಜಾಬ್‌ನ ತರನ್‌ತರನ್ ಕ್ಷೇತ್ರದಿಂದ ಆಮ್ ಆದ್ಮಿ ಪಕ್ಷದ ಹರ್ಮಿತ್ ಸಿಂಗ್ ಸಂಧು, ಮಿಜೋರಾಂನ ದಂಪಾ ಕ್ಷೇತ್ರದಿಂದ ಮಿಜೊ ನ್ಯಾಷನಲ್ ಫ್ರಂಟ್ ಅಭ್ಯರ್ಥಿ ಡಾ.ಆರ್.ಲಾಲ್ ತಾಂಗ್ಲಿಯಾನ ಗೆಲುವು ಸಾಧಿಸಿದ್ದಾರೆ.

ಜಾರ್ಖಂಡ್‌ನಲ್ಲಿ ಜೆ.ಜೆ.ಎಂ ಪಕ್ಷದ ಅಭ್ಯರ್ಥಿ ಘಡ್ಸಿಲಾ ಕ್ಷೇತ್ರದಲ್ಲಿ ಜಯ ಸಾಧಿಸಿದ್ದಾರೆ.

***************

ಏಳು ರಾಜ್ಯಗಳ ೮ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ತಲಾ ಎರಡು ಸ್ಥಾನಗಳನ್ನು ಗೆದ್ದಿವೆ,

ಆಮ್ ಆದ್ಮಿ ಪಕ್ಷ, ಪಿಡಿಪಿ, ಜೆಜೆಎಂ ಮತ್ತು ಮಿಜೊ ನ್ಯಾಷನಲ್ ಫ್ರಂಟ್ ತಲಾ ಒಂದು ಸ್ಥಾನವನ್ನು ಗೆದ್ದಿವೆ.

ಜಮ್ಮು-ಕಾಶ್ಮೀರದ ನಗ್ರೊಟಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ದೆವ್ಯಾನಿ ರಾಣಾ ಜಯಗಳಿಸಿದ್ದಾರೆ. ಒಡಿಶಾದಲ್ಲಿ ನೌಪಾದ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಜೈ ಡೋಲಕಿಯಾ ತಮ್ಮ ಸಮೀಪದ ಕಾಂಗ್ರೆಸ್ ಅಭ್ಯರ್ಥಿ ಘಾಸಿ ರಾಮ್ ಮಾಜಿ ವಿರುದ್ಧ ೮೩ ಸಾವಿರಕ್ಕೂ ಅಧಿಕ ಮತಗಳ ಅಂತರದಲ್ಲಿ ಜಯಗಳಿಸಿದ್ದಾರೆ. ತೆಲಂಗಾಣದ ಜುಬ್ಲಿ ಹಿಲ್ಸ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ನವೀನ್ ಯಾದವ್, ರಾಜಸ್ಥಾನದ ಅಂತಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಪ್ರಮೋದ್ ಜೈನ್ ಭಾಯಾ, ಪಂಜಾಬ್‌ನ ತರನ್‌ತರನ್ ಕ್ಷೇತ್ರದಿಂದ ಆಮ್ ಆದ್ಮಿ ಪಕ್ಷದ ಹರ್ಮಿತ್ ಸಿಂಗ್ ಸಂಧು, ಮಿಜೋರಾಂನ ದಂಪಾ ಕ್ಷೇತ್ರದಿಂದ ಮಿಜೊ ನ್ಯಾಷನಲ್ ಫ್ರಂಟ್ ಅಭ್ಯರ್ಥಿ ಡಾ.ಆರ್.ಲಾಲ್ ತಾಂಗ್ಲಿಯಾನ ಗೆಲುವು ಸಾಧಿಸಿದ್ದಾರೆ.

ಜಾರ್ಖಂಡ್‌ನಲ್ಲಿ ಜೆ.ಜೆ.ಎಂ ಪಕ್ಷದ ಅಭ್ಯರ್ಥಿ ಘಡ್ಸಿಲಾ ಕ್ಷೇತ್ರದಲ್ಲಿ ಜಯ ಸಾಧಿಸಿದ್ದಾರೆ.

***************

ಬಿಹಾರದಲ್ಲಿ ಉತ್ತಮ ಆಡಳಿತ, ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿಯ ಗೆಲುವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಬೃಹತ್ ಗೆಲುವು ಬಹುತೇಕ ಖಚಿತವಾಗಿರುವ ಬೆನ್ನಲ್ಲೆ ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿರುವ ಅವರು,

ಮುಂಬರುವ ದಿನಗಳಲ್ಲಿ, ಈವರೆಗೆ ಮಾಡಿಕೊಂಡು ಬಂದಿರುವಂತೆ ಬಿಹಾರದ ಸರ್ವತೋಮುಖ ಅಭಿವೃದ್ಧಿಗಾಗಿ ಸಕ್ರಿಯವಾಗಿ ಕೆಲಸ ಮಾಡಲಾಗುವುದು. ಅಲ್ಲಿರುವ ಯುವಜನತೆ ಮತ್ತು ಮಹಿಳೆಯರಿಗೆ ಸಮೃದ್ಧ ಜೀವನ ನಡೆಸಲು ಸಾಕಷ್ಟು ಅವಕಾಶಗಳು ದೊರೆಯುವುದನ್ನು ಖಚಿತಪಡಿಸಿಕೊಳ್ಳಲಾಗುವುದು ಎಂದಿದ್ದಾರೆ.

ಕೇಂದ್ರ ಸಚಿವ ಅಮಿತ್ ಶಾ, ಪಕ್ಷದ ಕಾರ್ಯಕರ್ತರ ಶ್ರಮವನ್ನು ಶ್ಲಾಘಿಸಿದ್ದು, ಚುನಾವಣೆಯಲ್ಲಿ ಬಂದಿರುವ ಫಲಿತಾಂಶ ರಾಜ್ಯ ಸರ್ಕಾರದ ಕಾರ್ಯನಿರ್ವಹಣೆಯ ಪರವಾಗಿದೆ. ಇದು ಅಭಿವೃದ್ಧಿ ಹೊಂದಿದ ಬಿಹಾರದಲ್ಲಿ ವಿಶ್ವಾಸ ಹೊಂದಿರುವ ಪ್ರತಿಯೊಬ್ಬ ಬಿಹಾರ್ ಮತದಾರನ ಗೆಲುವಾಗಿದೆ ಎಂದಿದ್ದಾರೆ.

***************

ಈ ತಿಂಗಳ ೪ ರಂದು ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಎಸ್ಐಆರ್ ಎರಡನೇ ಹಂತ ಆರಂಭವಾದಾಗಿನಿಂದ ೪೬ ಕೋಟಿಗೂ ಅಧಿಕ ಅರ್ಜಿಗಳನ್ನು ಮತದಾರರಲ್ಲಿ ವಿತರಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಈ ಹಂತದಲ್ಲಿ ಒಳಗೊಳ್ಳಬೇಕಾದ ಒಟ್ಟು ೫೧ ಕೋಟಿ ಮತದಾರರಲ್ಲಿ ಇದು ಶೇಕಡ ೯೧ ರಷ್ಟಿದೆ. ಉತ್ತರ ಪ್ರದೇಶದಲ್ಲಿ ಗರಿಷ್ಠ ೧೩ ಕೋಟಿ ೭೪ ಲಕ್ಷಕ್ಕೂ ಹೆಚ್ಚು ಅರ್ಜಿಗಳನ್ನು ಹಸ್ತಾಂತರಿಸಲಾಗಿದೆ.

ಎರಡನೇ ಹಂತದಲ್ಲಿ ಚುನಾವಣಾ ಆಯೋಗ ೯ ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ತೀವ್ರ ಪರಿಷ್ಕರಣೆ ಆರಂಭಿಸಿದ್ದು, ಮುಂದಿನ ತಿಂಗಳ ೪ರವರೆಗೆ ಮುಂದುವರೆಯಲಿದೆ.

***************

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಇಂದು ದಕ್ಷಿಣ ಕೋರಿಯಾದ ಪ್ರಮುಖ ಹಡಗು ಕಂಪನಿಗಳ ಸಿಇಒ ಗಳೊಂದಿಗೆ ಸಭೆ ನಡೆಸಿದರು.

ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಸಚಿವರು, ದಕ್ಷಿಣ ಕೊರಿಯಾ ಕಂಪನಿಗಳ ಪ್ರತಿನಿಧಿಗಳೊಂದಿಗೆ ಉತ್ಪಾದಕ ಚರ್ಚೆ ನಡೆಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಇಂಧನ ಮತ್ತು ಸಾಗಣೆ ವೇಗವಾಗಿ ಬೆಳೆಯುತ್ತಿರುವ

ಆರ್ಥಿಕತೆಗೆ ಯಾವ ರೀತಿ ಆಧಾರಸ್ತಂಭಗಳಾಗಿವೆ ಎಂಬುದರ ಕುರಿತು ಚರ್ಚಿಸಲಾಗಿದೆ ಎಂದು ತಿಳಿಸಿದ್ದಾರೆ.

೧೫೦ ಶತಕೋಟಿಗೂ ಹೆಚ್ಚು ಕಚ್ಚಾ ಮತ್ತು ಅನಿಲ ಆಮದುಗಳು ಇಂಧನ ಮತ್ತು ಸಾಗಣೆ ಹಡಗುಗಳ ಬೇಡಿಕೆಯನ್ನು ಪ್ರತಿಬಿಂಬಿಸುತ್ತವೆ. ಕೊರಿಯಾದ ಮುಂದುವರೆದ ಹಡಗು ನಿರ್ಮಾಣ ತಂತ್ರಜ್ಞಾನ ೧೦ ಭಾರತದ ಉತ್ಪಾದನಾ ನೆಲೆ ಮತ್ತು ಕಡಿಮೆ ಉತ್ಪಾದನಾ ವೆಚ್ಚಗಳ ಸಂಯೋಜನೆ, ಹೆಚ್ಚುತ್ತಿರುವ ದೇಶೀಯ ಅಗತ್ಯಗಳನ್ನು ಹಾಗೂ ಹಡಗುಗಳಿಗೆ ಜಾಗತಿಕ ಮಾರುಕಟ್ಟೆಗಳನ್ನು ಪೂರೈಸಬಲ್ಲ ಪರಸ್ಪರ ಪ್ರಯೋಜನಕಾರಿ ಪಾಲುದಾರಿಕೆ ಕುರಿತು ಚರ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು.

***************

ಮಕ್ಕಳ ದಿನಾಚರಣೆಯ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ವಿವಿಧ ಶಾಲೆಗಳು ಮತ್ತು ಸಂಸ್ಥೆಗಳ ಮಕ್ಕಳೊಂದಿಗೆ ಸಂವಾದ ನಡೆಸಿದರು.

ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಅವರು, ಮಕ್ಕಳು ರಾಷ್ಟ್ರದ ಭವಿಷ್ಯವಾಗಿದ್ದು, ಅವರನ್ನು ಆತ್ಮವಿಶ್ವಾಸ ಮತ್ತು ಜವಾಬ್ದಾರಿಯುತ ನಾಗರಿಕರನ್ನಾಗಿ ಬೆಳೆಸುವುದು ಅತ್ಯಗತ್ಯ ಎಂದು ಹೇಳಿದ್ದಾರೆ.

ರಾಷ್ಟ್ರಪತಿಗಳನ್ನು ಭೇಟಿ ಮಾಡಿದ ವೇಳೆ ಮಕ್ಕಳು ರಾಷ್ಟ್ರೀಯ ಗೀತೆ ವಂದೇ ಮಾತರಂ ಹಾಡುವ ಜೊತೆಗೆ ಕೆಲವು ಕವಿತೆಗಳನ್ನು ಪಠಿಸಿದರು.

***************

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ದೇಶದ ೧೧ ಕೋಟಿಗೂ ಹೆಚ್ಚು ರೈತ ಕುಟುಂಬಗಳ ಬ್ಯಾಂಕ್ ಖಾತೆಗಳಿಗೆ ಕೇಂದ್ರ ಸರ್ಕಾರ ಈವರೆಗೆ ಪಾವತಿಗಳು ೩.೭ ಲಕ್ಷ ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ನೇರವಾಗಿ ವಿತರಿಸಿದೆ.

ಇದಕ್ಕೆ ಪೂರಕವಾಗಿ ಇದೇ ೧೯ ರಂದು ಪ್ರಧಾನಿ ನರೇಂದ್ರ ಮೋದಿ ಈ ಯೋಜನೆಯ ೨೧ನೇ ಕಂತನ್ನು ಬಿಡುಗಡೆಗೊಳಿಸಲಿದ್ದಾರೆ.

೨೦೧೯ ರಲ್ಲಿ ಆರಂಭಿಸಲಾದ ಈ ಯೋಜನೆಯಡಿ ಅರ್ಹ ರೈತ ಕುಟುಂಬಕ್ಕೆ ವಾರ್ಷಿಕ ೬ ಸಾವಿರ ರೂಪಾಯಿಗಳ ಆರ್ಥಿಕ ಸಹಾಯ ಒದಗಿಸಲಾಗುತ್ತದೆ.

***************

ರಫ್ತುದಾರರು ಅಮೆರಿಕಾ ವಿಧಿಸಿರುವ ಸುಂಕಗಳ ಪರಿಣಾಮಗಳನ್ನು ತಗ್ಗಿಸಲು ಉತ್ತಮ ವಿನ್ಯಾಸಗಳು ಮತ್ತು ಮಾನದಂಡಗಳೊಂದಿಗೆ ಭಾರತೀಯ ಸರಕುಗಳಿಗೆ ಹೊಸ ಮಾರುಕಟ್ಟೆಗಳನ್ನು ಕಂಡುಕೊಳ್ಳುವಂತೆ ಕೇಂದ್ರ ಜವಳಿ ಸಚಿವಾಲಯದ ವ್ಯಾಪಾರ ಸಲಹೆಗಾರ ಎ.ಬಿಪಿನ್ ಮೆನನ್ ಸಲಹೆ ನೀಡಿದ್ದಾರೆ.

ಬೆಂಗಳೂರಿನಲ್ಲಿಂದು ರೇಷ್ಮೆ ಮತ್ತು ಇತರೆ ಸಂಬಂಧಿತ ರೇಷ್ಮೆ ಉತ್ಪನ್ನಗಳ ರಫ್ತುದಾರರು ಮತ್ತು ಉದ್ಯಮಿಗಳಿಗಾಗಿ ನಡೆದ ಜನಸಂಪರ್ಕ ಮತ್ತು ಮುಂದಿನ ಹಾದಿ ಕುರಿತ ಸಭೆಯಲ್ಲಿ ಮಾತನಾಡಿದ ಅವರು, ಆಸ್ಟ್ರೇಲಿಂii, ಯುಎಇ ಮತ್ತು ಬ್ರಿಟನ್ ಜೊತೆಗಿನ ಮುಕ್ತ ವ್ಯಾಪಾರ ಒಪ್ಪಂದಗಳು ಭಾರತೀಯ ರಫ್ತುದಾರರಿಗೆ ಹೊಸ ತೆರೆದಿವೆ.

ಈ ನಡುವೆ ಭಾರತೀಯ ಉತ್ಪನ್ನಗಳು ಅಂತಾರಾಷ್ಟ್ರೀಯ ಮಾನದಂಡಗಳನ್ನು ಪೂರೈಸದ ಹೊರತು ಮತ್ತು ಆಕರ್ಷಕ ಹೊಸ ವಿನ್ಯಾಸಗಳನ್ನು ಪರಿಚಯಿಸಿದ ಹೊರತು ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲ ಎಂದರು.

***************

ವಿಮಾ ಕಂಪನಿಗಳು ಅತ್ಯುನ್ನತ ಗುಣಮಟ್ಟದ ಸೇವೆಗಳನ್ನು ಕಾಯ್ದುಕೊಳ್ಳುವಂತೆ ಹಾಗೂ ವಿಮಾದಾರರಿಗೆ ವಿಶೇಷವಾಗಿ ಆಸ್ಪತ್ರೆಗೆ ದಾಖಲಾಗುವ ಮತ್ತು ಕ್ಲೈಮ್ ಇತ್ಯರ್ಥದ ಸಮಯದಲ್ಲಿ ಸರಳ ಪ್ರಕ್ರಿಯೆ ಖಚಿತಪಡಿಸಿಕೊಳ್ಳುವಂತೆ ನವದೆಹಲಿಯಲ್ಲಿ ನಡೆದ ವಿಮಾದಾರರು ಹಾಗೂ ಆರೋಗ್ಯ ಪೂರೈಕೆದಾರರ ಸಭೆಯಲ್ಲಿ ಹಣಕಾಸು ಸಚಿವಾಲಯ ಕರೆ ನೀಡಿದೆ.

***************

ಸುಲಭ ಆದಾಯ ಗಳಿಕೆಯ ಹೂಡಿಕೆ ವೇದಿಕೆಯೊಂದನ್ನು ಉತ್ತೇಜಿಸುತ್ತಿರುವಂತೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರ ವಿಡಿಯೊ ಸತ್ಯಕ್ಕೆ ದೂರವಾಗಿದೆ ಎಂದು ಸರ್ಕಾರ ತಿಳಿಸಿದೆ.

ಸರ್ಕಾರ ಇಂತಹ ಯಾವುದೇ ವೇದಿಕೆಯನ್ನು ಉತ್ತೇಜಿಸುವುದಿಲ್ಲ ಮತ್ತು ಈ ವಿಡಿಯೊ ನಕಲಿಯಾಗಿದ್ದು, ಡಿಜಿಟಲ್ ಮಾಧ್ಯಮದ ಮೂಲಕ ಮಾರ್ಪಡಿಸಲಾಗಿದೆ ಎಂದು ಪಿಐಬಿಯ ಸತ್ಯಶೋಧನಾ ಘಟಕ ತಿಳಿಸಿದೆ.

***************

ಕೋಲ್ಕೊತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆಯುತ್ತಿರುವ ಭಾರತ ಮತ್ತು ಪ್ರವಾಸಿ ದಕ್ಷಿಣ ಆಫ್ರಿಕಾ ತಂಡಗಳ ನಡುವಿನ ಎರಡು ಟೆಸ್ಟ್ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೧೫೯ ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡ ನಂತರ, ಮೊದಲ ಇನ್ನಿಂಗ್ಸ್ ಅನ್ನು ಆರಂಭಿಸಿದ ಭಾರತ ಮೊದಲ ದಿನದಾಟದ ಅಂತ್ಯದ ವೇಳೆಗೆ ೧ ವಿಕೆಟ್ ನಷ್ಟಕ್ಕೆ ೩೭ ರನ್ ಗಳಿಸಿದೆ.

ಪ್ರಸ್ತುತ ೧೩ ರನ್ ಗಳಿಸಿರುವ ಕೆ.ಎಲ್.ರಾಹುಲ್ ಹಾಗೂ ೬ ರನ್‌ಗಳೊಂದಿಗೆ ವಾಷಿಂಗ್ಟನ್ ಸುಂದರ್ ಕಣದಲ್ಲಿದ್ದು, ನಾಳೆ ಆಟ ಮುಂದುವರೆಸಲಿದ್ದಾರೆ.

ಎರಡನೇ ದಿನದಾಟ ನಾಳೆ ಬೆಳಗ್ಗೆ ೯.೩೦ಕ್ಕೆ ಆರಂಭವಾಗಲಿದೆ.

***************

ಎರಡು ದಿನಗಳ ಗುಜರಾತ್ ಪ್ರವಾಸದಲ್ಲಿರುವ ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ ಇಂದು ರಾಜ್‌ಕೋಟ್ ಪೋರ್ ಬಂದರ್ ನಡುವೆ ಚಲಿಸುವ ವಿಶೇಷ ರೈಲಿಗೆ ರಾಜ್‌ಕೋಟ್ ರೈಲ್ವೆ ನಿಲ್ದಾಣದಲ್ಲಿ ಹಸಿರು ನಿಶಾನೆ ತೋರಿದರು.

ಈ ವೇಳೆ ಮಾತನಾಡಿದ ಅವರು, ನೂತನ ಎರಡು ಸ್ಥಳೀಯ ರೈಲುಗಳ ಆರಂಭ ಸೌರಾಷ್ಟ್ರ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಉತ್ತೇಜನ ನೀಡುತ್ತದೆ ಹಾಗೂ ಪ್ರಯಾಣಿಕರ ಅನುಕೂಲತೆಯನ್ನು ಹೆಚ್ಚಿಸುತ್ತದೆ ಎಂದು ಹೇಳಿದರು.

***************

ಮಾಜಿ ಪ್ರಧಾನಿ ಪಂಡಿತ್ ಜವಹರ್‌ಲಾಲ್ ನೆಹರು ಅವರ ಜಯಂತಿ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ನೆಹರು ಅವರಿಗೆ ಗೌರವ ನಮನ ಸಲ್ಲಿಸಿದ್ದಾರೆ.

ಅವರು ತಮ್ಮ ಸಾಮಾಜಿಕ ಜಾಲತಾಣ ಪೋಸ್ಟ್‌ನಲ್ಲಿ, ದೇಶದ ಮೊದಲ ಪ್ರಧಾನಿ ಅವರಿಗೆ ಗೌರವ ನಮನ ಸಲ್ಲಿಸುತ್ತಿದ್ದೇನೆ ಎಂದು ಹೇಳಿದ್ದಾರೆ. ಪಂಡಿತ್ ನೆಹರು ಅವರು ೧೮೮೯ರ ನವೆಂಬರ್ ೧೪ ರಂದು ಜನಿಸಿದರು. ಮಕ್ಕಳಿಗೆ ಅಚ್ಚುಮೆಚ್ಚಿನವರಾಗಿದ್ದ ನೆಹರು ಅವರ ಜನ್ಮ ದಿನವನ್ನು ರಾಷ್ಟ್ರದಾದ್ಯಂತ ಮಕ್ಕಳ ದಿನವನ್ನಾಗಿ ಆಚರಿಸಲಾಗುತ್ತದೆ.

******** ಮುಕ್ತಾಯ ********